# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 906 |
| ಸದಸ್ಯರ ಹೆಸರು | ಶ್ರೀ ಪ್ರಕಾಶ್ ಕೆ.ರಾಥೋಡ್ |
| ಉತ್ತರಿಸುವ ದಿನಾಂಕ | 21-09-2022 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಪ್ರಸ್ತುತ ಅಸ್ತಿತ್ವದಲ್ಲಿರುವ ಹಿಂದೂ ದೇವಾಲಯಗಳ ಸಂಖ್ಯೆ ಎಷ್ಟು; ಎಷ್ಟು ವಿಧಗಳಲ್ಲಿ ಶ್ರೇಣೀಕರಿಸಲಾಗಿದೆ;</td><td>ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34563 ದೇವಾಲಯಗಳಿವೆ. ಅವುಗಳನ್ನು ಈ ಕೆಳಕಂಡಂತಿದೆ.
<table>
<tr><th>ಪ್ರವರ್ಗ</th><th>ವರ್ಗೀಕರಣ</th><th>ಸಂಸ್ಥೆಗಳ ಸಂಖ್ಯೆ</th></tr>
<tr><td>ಎ</td><td>ವಾರ್ಷಿಕ ವರಮಾನವು ರೂ ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು</td><td>201</td></tr>
<tr><td>ಬಿ</td><td>ವಾರ್ಷಿಕ ವರಮಾನವು ರೂ ಐದು ಲಕ್ಷಗಳನ್ನು ಮೀರಿ ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>139</td></tr>
<tr><td>ಸಿ</td><td>ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>34223</td></tr>
<tr><td colspan="2">ಒಟ್ಟು</td><td>34563</td></tr>
</table></td></tr>
<tr><td>ಆ)</td><td>ಹಿಂದೂ ದೇವಾಲಯಗಳ ಅಧೀನಕ್ಕೆ ಸೇರಿರುವ ಜಮೀನು, ಕಟ್ಟಡಗಳು, ಮತ್ತಿತರ ಸಾರ್ವಜನಿಕ ಉಪಯೋಗಿ ಆಸ್ತಿಗಳನ್ನು ಗಣಕೀಕರಣಗೊಳಿಸಲಾಗಿದೆಯೇ;</td><td>ಪ್ರವರ್ಗ-"ಎ" ಮತ್ತು ಪ್ರವರ್ಗ "ಬಿ" ಅಧಿಸೂಚಿತ ದೇವಾಲಯಗಳಿಗೆ ಸೇರಿದ ಜಮೀನುಗಳ, ಕಟ್ಟಡಗಳ, ಮತ್ತಿತರ ಸಾರ್ವಜನಿಕ ಉಪಯೋಗಿ ಆಸ್ತಿಗಳ ಮಾಹಿತಿಯನ್ನು ITMS ತಂತ್ರಾಂಶದಲ್ಲಿ ಭರ್ತಿ ಮಾಡಿ ಗಣಕೀಕರಣಗೊಳಿಸಲು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಪ್ರವರ್ಗ-"ಸಿ" ಅಧಿಸೂಚಿತ ದೇವಾಲಯಗಳ ಸ್ಥಿರಾಸ್ತಿಗಳ ಸರ್ವೆ ಕಾರ್ಯಮುಗಿದ ತರುವಾಯ ತಾಲ್ಲೂಕುಗಳಿಂದ ಅಧಿಸೂಚಿತ ದೇವಾಲಯಗಳ ಚರ ಮತ್ತು ಸ್ಥಿರಾಸ್ತಿಗಳ ಮಾಹಿತಿಗಳನ್ನು ಪಡೆದು ITMS ತಂತ್ರಾಂಶದಲ್ಲಿ ಭರ್ತಿ ಮಾಡಿ ಗಣಕೀಕರಣಗೊಳಿಸಲು ಕ್ರಮವಹಿಸಲಾಗುತ್ತದೆ.</td></tr>
<tr><td>ಇ)</td><td>ಗಣಕೀಕರಣಗೊಳಿಸಿದ್ದಲ್ಲಿ ರಾಜ್ಯದ ಹಿಂದೂ ದೇವಾಲಯಗಳ ಅಧೀನದಲ್ಲಿರುವ ಆಸ್ತಿಗಳೆಷ್ಟು; (ತಾಲ್ಲೂಕುವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು)</td><td>ಪ್ರಸ್ತುತ ITMS ತಂತ್ರಾಂಶದಲ್ಲಿ ಗಣಕೀಕರಣಗೊಳಿಸಲಾದ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೊಳ್ಳಪಡುವ ಆಸ್ತಿಗಳ ತಾಲ್ಲೂಕುವಾರು ಹಾಗೂ ಜಿಲ್ಲಾವಾರು ವಿವರವನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.<br>ಮಾಹಿತಿಯು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.</td></tr>
<tr><td>ಈ)</td><td>ಹಿಂದೂ ದೇವಾಲಯಗಳ ಕೆಲವೊಂದು ಆಸ್ತಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ಅತಿಕ್ರಮಣ ಕ್ಕೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
</table>

| | | |
|---|---|---|
| ಉ) | ಬಂದಿದ್ದಲ್ಲಿ, ಅತಿಕ್ರಮಣಕ್ಕೊಳಗಾದ ಆಸ್ತಿಯ ವಿವರ ಹಾಗೂ ಅದರ ಅಂದಾಜು ಮೌಲ್ಯವೆಷ್ಟು: (ವಿವರ ನೀಡುವುದು) | ಪ್ರಸ್ತುತ ಲಭ್ಯ ಮಾಹಿತಿಯಂತೆ ಈವರೆಗೆ ಧಾರ್ಮಿಕ ದತ್ತಿ ಕೇಂದ್ರ ಕಛೇರಿಯ ವತಿಯಿಂದ ಒಟ್ಟು 339 ದೇವಾಲಯಗಳನ್ನು ಅಳತೆ ಮಾಡಿದ್ದು, ಅಳತೆ ಮಾಡಿದ್ದ ವಿಸ್ತೀರ್ಣ 2,651 ಎಕರೆ 22.5 ಗುಂಟೆ ಇದ್ದು, ಒಟ್ಟು 847 ಎಕರೆ 6 ಗುಂಟೆ ಒತ್ತುವರಿ ಗುರುತಿಸಲಾಗಿತ್ತು.<br><br>ಈ ಪೈಕಿ ಬಹುತೇಕ ಒತ್ತುವರಿಯಾಗಿದ್ದ ಪ್ರದೇಶಗಳನ್ನು ಇನಾಂ ರದ್ದಿಯಾತಿ ಕಾಯ್ದೆ ಹಾಗೂ ಭೂಸುಧಾರಣಾ ಕಾಯ್ದೆಗಳ ಅಡಿಯಲ್ಲಿ ಮಂಜೂರು ಮಾಡಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಒತ್ತುವರಿ ವಿಸ್ತೀರ್ಣವು ನಿಜವಾದ ಒತ್ತುವರಿಯೇ ಅಥವಾ ಮಂಜೂರಾಗಿದ್ದೇ, ಎಂಬ ಬಗ್ಗೆ ಪಹಣಿಯಲ್ಲಿ ಇಂಡೀಕರಣ ಆಗಿರುವುದಿಲ್ಲ ಆದ್ದರಿಂದ ಅಧಿಸೂಚಿತ ದೇವಾಲಯಗಳ ಆಸ್ತಿ ಒತ್ತುವರಿಯ ನಿಖರವಾದ ಅಂಕಿ ಅಂಶಗಳನ್ನು ಪಹಣಿಯ ಇಂಡೀಕರಣ ಕಾರ್ಯ ಪೂರ್ಣವಾದ ನಂತರವಷ್ಟೇ ಮಾಹಿತಿ ಲಭ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮಂಜೂರಿ ವಿವರಗಳನ್ನು ಪಹಣಿಯಲ್ಲಿ ಇಂಡೀಕರಿಸಿ, ದೇವಾಲಯಗಳಿಗೆ ಉಳಿಯುವ ಬಾಕಿ ಜಮೀನಿನ ಕುರಿತು ಅಧಿಸೂಚನೆ ಹೊರಡಿಸಲು ಕೋರಿ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.<br><br>ರಾಜ್ಯದಾದ್ಯಂತ ಇರುವ ಅಧಿಸೂಚಿತ ದೇವಾಲಯದ ಸ್ವತ್ತುಗಳು ಆಯಾಯ ಜಿಲ್ಲೆಯಲ್ಲಿನ ಗ್ರಾಮಠಾಣಾ/ ಪಂಚಾಯಿತಿ/ ಪುರಸಭೆ/ ನಗರಸಭೆ/ ಮಹಾನಗರಪಾಲಿಕೆ/ ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದರಿಂದ, ಸದರಿ ವ್ಯಾಪಿಯಲ್ಲಿ ಇರುವ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ (ಖಾಲಿಜಾಗ/ ನಿವೇಶನ/ ಕಟ್ಟಡ/ ಮಳಿಗೆಗಳು/ ಕಲ್ಯಾಣ ಮಂಟಪ /ಸಮುದಾಯ ಭವನ/ ಅತಿಥಿ ಗೃಹಗಳು ಇತ್ಯಾದಿ) ಮೌಲ್ಯ ನಿರ್ಧರಣೆಯನ್ನು ಅಲ್ಲಿನ ಸ್ಥಳೀಯ ಮಾರುಕಟ್ಟೆ ದರಕ್ಕನುಗುಣವಾಗಿ ಸಕ್ಷಮ ಪ್ರಾಧಿಕಾರಿಗಳು (ನೋಂದಣಿ ಮತ್ತು ಮುದ್ರಾಂಕ ಇಲಾಖೆ & ಲೋಕೋಪಯೋಗಿ ಇಲಾಖೆ) ರವರಿಂದ ನಿರ್ಧರಿಸಲ್ಪಡುತ್ತದೆ ಹಾಗೂ ಕಾಲಕಾಲಕ್ಕೆ ಸ್ವತ್ತುಗಳ ಮೌಲ್ಯಗಳಲ್ಲಿ ಬದಲಾವಣೆಯಾಗುವುದರಿಂದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು 34563 ಮುಜರಾಯಿ ದೇವಾಲಯಗಳ 2021-22ನೇ ಸಾಲಿನ ಸ್ವತ್ತುಗಳ ನಿಖರ ಮೌಲ್ಯ ಅಂದಾಜಿಸಲು ಸಾಧ್ಯವಾಗಿರುವುದಿಲ್ಲ. |
| ಊ) | ಅತಿಕ್ರಮ ಆಸ್ತಿಗಳ ರಕ್ಷಣೆಗೆ ಸರ್ಕಾರ ಯಾವ ರೀತಿ ಕ್ರಮ ಕೈಗೊಂಡಿದೆ; | ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.<br>i) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಅಧಿನಿಯಮ 1997ರ ಕಲಂ 31ರನ್ವಯ ಅಧಿಸೂಚಿತ ಸಂಸ್ಥೆಗಳ ಭೂಮಿ ಮತ್ತು ಇತರ ಸ್ವತ್ತಿನ ಸಮೀಕ್ಷೆ ಮತ್ತು ಪ್ರಕಟಣೆಯನ್ನು ಹೊರಡಿಸಲು ಕ್ರಮವಹಿಸಲಾಗಿದೆ.<br>ii) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ನಿಯಮಗಳು 2002ರ ನಿಯಮ 25ರಡಿಯಲ್ಲಿ ನಮೂನೆ-1 ರಂತೆ ಸ್ಥಿರಸ್ವತ್ತಿನ ರಿಜಿಸ್ಟರ್‌ಗಳನ್ನು ಆಯಾಯ ಅಧಿಸೂಚಿತ ದೇವಾಲಯಗಳಲ್ಲಿ ನಿರ್ವಹಿಸಲು ಕ್ರಮವಹಿಸಲಾಗಿದೆ.<br>iii) ಅಧಿಸೂಚಿತ ದೇವಾಲಯಗಳಿಗೆ ಸೇರಿದ ಚರ ಮತ್ತು ಸ್ಥಿರ ಸ್ವತ್ತುಗಳು ಸುವ್ಯವಸ್ಥಿತ ನಿರ್ವಹಣೆ ಮತ್ತು ಸ್ಥಿರಾಸ್ತಿಗಳನ್ನು ಅತಿಕ್ರಮಣಗಳಿಂದ ತಡೆಗಟ್ಟಿ ಕಾನೂನು ರೀತ್ಯಾ ದೇವಸ್ಥಾನ/ ದೈವಸ್ಥಾನಗಳ ಹೆಸರಿನಲ್ಲಿ ದಾಖಲಿಸಿ ಸುರಕ್ಷತೆ ಒದಗಿಸಿಕೊಡುವಲ್ಲಿ ಕ್ರಮಕೈಗೊಳ್ಳಲಾಗಿದೆ. ಮುಂದುವರೆದು ಮುಜರಾಯಿ ದೇವಾಲಯಗಳ ವಾಸ್ತವಿಕ ಪರಿಸ್ಥಿತಿಯ ಸಮೀಕ್ಷೆ ಮತ್ತು ಸಮರ್ಪಕ ಉಪಯೋಗ ಹಾಗೂ ಜಮೀನುಗಳ ರಕ್ಷಣೆಗಾಗಿ ರಾಜ್ಯದ ಎಲ್ಲಾ ಜಿಲ್ಲೆಗಳ ಆಯಾಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ/69/ಮುಅಬಿ/2008, ದಿನಾಂಕ:16.09.2008ರಂತೆ |

| | | |
|---|---|---|
| | | ರಚಿಸಲಾಗಿದೆ. ಅದರಂತೆ ಇಲಾಖಾ ಅಧೀನಕ್ಕೆ ಒಳಪಡುವ ಆಸ್ತಿಗಳ ಸಂರಕ್ಷಣೆ ಕಾರ್ಯಕೈಗೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.<br><br>iv) ಸರ್ಕಾರದ ಆದೇಶ ಸಂಖ್ಯೆ:ಕಂಇ 49 ಮುಆಬಿ 2021 ದಿನಾಂಕ:05.09.2022ರ ಆದೇಶದಲ್ಲಿ ಮುಜರಾಯಿ ಇಲಾಖೆಯ ಅಧಿಸೂಚಿತ ಸಂಸ್ಥೆಗಳ ಜಮೀನುಗಳ ಸಂರಕ್ಷಣೆಗೆ ಮೊದಲ ಹಂತದಲ್ಲಿ ಎಲ್ಲಾ ' ಎ' ಮತ್ತು 'ಬಿ' ಶ್ರೇಣಿಯ ಹಾಗೂ ಮಹಾನಗರ ಪಾಲಿಕೆ/ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿ ಪ್ರದೇಶಗಳಲ್ಲಿರುವ 'ಸಿ' ಶ್ರೇಣಿಯ ಮುಜರಾಯಿ ಆಸ್ತಿಗಳ ಬಾಬ್ತು ಹಕ್ಕು ದಾಖಲೆಗಳ ಇಂಡೀಕರಣ, ಅಳತೆ ಕಾರ್ಯ ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಅಸ್ತಿಗಳ ತೆರವುಗೊಳಿಸುವಿಕೆ ಇತ್ಯಾದಿ ಕೆಲಸಗಳನ್ನು ತ್ವರಿತ ಗತಿಯಲ್ಲಿ ನಿರ್ವಹಿಸಿ ಮುಜರಾಯಿ ಇಲಾಖೆಯ ಇತರೆ ಗ್ರೂಪ್ 'ಸಿ' ಶ್ರೇಣಿಯ ದೇವಾಲಯಗಳ ಹಕ್ಕು ದಾಖಲೆಗಳ ಇಂಡೀಕರಣ, ಅಳತೆ ಕಾರ್ಯ ಒತ್ತುವರಿ ತೆರವುಗೊಳಿಸುವಿಕೆ, ಗುತ್ತಿಗೆ ಅವಧಿ ಮುಗಿದ ಆಸ್ತಿಗಳ ತೆರವುಗೊಳಿಸುವಿಕೆಯಲ್ಲಿ ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ನಡೆಸಲು ರಾಜ್ಯಮಟ್ಟದ/ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ. |
| ಖ) | ಇದುವರೆವಿಗೂ ಎಷ್ಟು ಅತಿಕ್ರಮಣ ಆಸ್ತಿಗಳನ್ನು ಮರು ಸ್ವಾಧೀನ ಪಡಿಸಿಕೊಳ್ಳಲಾಗಿದೆ? (ತಾಲ್ಲೂಕು ಹಾಗೂ ಜಿಲ್ಲಾವಾರು ಮಾಹಿತಿ ನೀಡುವುದು) | • ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ದಿನಾಂಕ:11-12-2020ರ ಪತ್ರದಲ್ಲಿ ಮುಜರಾಯಿ ಆಸ್ತಿಗಳನ್ನು ಅಳತೆಗೆ ಒಳಪಡಿಸಿ ದಾಖಲೆಗಳನ್ನು ಸಿದ್ಧಪಡಿಸಲು ಅಧ್ಯತೆ ಮೇರೆಗೆ ಕ್ರಮ ಜರುಗಿಸುವಂತೆ ಮತ್ತು ಪ್ರತಿ ತಿಂಗಳು ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ 5 ಆಸ್ತಿಗಳ ದಾಖಲೆಗಳನ್ನು ಅಂತಿಮ ಗೊಳಿಸುವ ಗುರಿಯನ್ನು ಸಾಧಿಸಲು ಅಗತ್ಯ ಕ್ರಮ ಕೈಗೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಅದರಂತೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳ ಸರ್ವೆ ಕಾರ್ಯವು ಪ್ರಗತಿಯಲ್ಲಿರುತ್ತದೆ.<br><br>• ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ದಿನಾಂಕ:11-11-2021ರಂದು ಪತ್ರ ಮುಖೇನ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚಿತ ದೇವಾಲಯಗಳ ಪಟ್ಟಿಯಲ್ಲಿರುವ ದೇವಾಲಯ ಸಂಸ್ಥೆಯ ಹೆಸರನ್ನು ಮ್ಯೂಟೇಷನ್ ಮತ್ತು ಆರ್.ಟಿ.ಸಿ.ಯಲ್ಲಿ ನಮೂದಿಸುವ ಕಾರ್ಯವನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.<br><br>• ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯ ಎಲ್ಲಾ ಅಧಿಸೂಚಿತ ದೇವಾಲಯಗಳ/ಸಂಸ್ಥೆಗಳ ಸ್ಥಿರಾಸ್ತಿಗಳ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಇನಾಂ ರದ್ದಿಯಾತಿ ಕಾಯ್ದೆ ಹಾಗೂ ಭೂಸುಧಾರಣಾ ಕಾಯ್ದೆಗಳ ಅಡಿಯಲ್ಲಿ ಅಧಿಸೂಚಿತ ದೇವಾಲಯಗಳ ಜಮೀನುಗಳನ್ನು ಮಂಜೂರು ಮಾಡಿರುವುದಾಗಿ ತಿಳಿದು ಬಂದಿರುತ್ತದೆ. ಸದರಿ ಒತ್ತುವರಿ ವಿಸ್ತೀರ್ಣವು ನಿಜವಾದ ಒತ್ತುವರಿಯೇ ಅಥವಾ ಮಂಜೂರಾಗಿದ್ದೇ, ಎಂಬ ಬಗ್ಗೆ ಪಹಣಿಯಲ್ಲಿ ಇಂಡೀಕರಣ ಆಗಿರುವುದಿಲ್ಲ ಆದ್ದರಿಂದ ಅಧಿಸೂಚಿತ ದೇವಾಲಯಗಳ ಆಸ್ತಿ ಒತ್ತುವರಿಯ ನಿಖರವಾದ ಅಂಕಿ ಅಂಶಗಳು ಪಹಣಿಯ ಇಂಡೀಕರಣ ಕಾರ್ಯ ಪೂರ್ಣವಾದ ನಂತರವಷ್ಟೇ ಮಾಹಿತಿ ಲಭ್ಯವಾಗುತ್ತದೆ.<br><br>• ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ಸಂಸ್ಥೆಗಳ ಕಟ್ಟಡ/ಜಾಗದಲ್ಲಿ ಅನಧಿಕೃತವಾಗಿ ಅನುಭವದಲ್ಲಿ ಇದ್ದ 190 ಅನಧಿಕೃತದಾರರನ್ನು ಸ್ಥಳದಿಂದ ತೆರವುಗೊಳಿಸಲು ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರಹಾಕುವುದು) ಅಧಿನಿಯಮ, 1974 ರಡಿಯಲ್ಲಿ ಸಕ್ಷಮ ಪ್ರಾಧಿಕಾರಿಯವರಾದ ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಇವರು ಆದೇಶ ಹೊರಡಿಸಿರುತ್ತಾರೆ. |

| | | |
|---|---|---|
| | | • ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ:ಸಂವ್ಯಶಾ 52 ಶಾಸನ 2021, ಬೆಂಗಳೂರು, ದಿನಾಂಕ:18.01.2022 ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ದೇವಾಲಯಕ್ಕೆ ಸೇರಿರುವ ಮತ್ತಷ್ಟು ಇನಾಂ ಜಮೀನುಗಳು ರೀಗ್ರ್ಯಾಂಟ್ ಆಗುವ ಸಾಧ್ಯತೆ ಇದೆ.<br><br>• ಭೂನ್ಯಾಯ ಮಂಡಳಿಯಲ್ಲಿ ಭೂ ಪರಭಾರೆಗೆ ಸಂಬಂದಿಸಿದಂತೆ ದಾಖಲಾಗಿರುವ ಪ್ರಕರಣಗಳಲ್ಲಿ ಅಧಿಸೂಚಿತ ಸಂಸ್ಥೆಗಳಿಗೆ ಸೇರಿದ ಸಾವಿರಾರು ಎಕರೆ ಭೂಮಿಯ ಪರಭಾರೆಯು ಇಲಾಖೆಯ ಗಮನಕ್ಕೂ ಸಹ ಬಾರದೇ ಆದೇಶವಾಗುತ್ತದೆ. ಮೇಲ್ಕಂಡ ಜಮೀನುಗಳ ಭೂದಾಖಲೆಗಳು ತಾಲ್ಲೂಕು ಕಛೇರಿಯ ತಹಶೀಲ್ದಾರ್ ರವರ ಸುಪರ್ಧಿಯಲ್ಲಿದ್ದು, ಧಾರ್ಮಿಕ ದತ್ತಿ ಇಲಾಖೆಯಲ್ಲಿ ನೌಕರರ ಸಿಬ್ಬಂದಿಗಳ ತೀವ್ರ ಕೊರತೆ ಇರುವುದರಿಂದ ಇಲಾಖೆಯು ಕಂದಾಯ ಇಲಾಖೆಯ ತಾಲ್ಲೂಕು ತಹಸೀಲ್ದಾರ್ ಕಛೇರಿಯ ಮೇಲೆ ಅವಲಂಬಿತವಾಗಿರುತ್ತದೆ.<br><br>• ಅಧಿಸೂಚನೆ ಹೊರಡಿಸದೇ ಜಿಲ್ಲಾಧಿಕಾರಿಗಳು ಒದಗಿಸಿರುವ ಪಟ್ಟಿಯನ್ನು ಆಧರಿಸಿ ಈವರೆವಿಗೆ ಸುಮಾರು 4246 ದೇವಾಲಯಗಳ ಆಸ್ತಿಗಳನ್ನು ಅಳತೆ ಮಾಡಿರುವುದಾಗಿ, ಸದರಿ ದೇವಾಲಯಗಳ ಅಳತೆ ಸಂದರ್ಭದಲ್ಲಿ ತಿಳಿದು ಬಂದ ಒತ್ತುವರಿ ವಿಸ್ತೀರ್ಣದ ವಿವರ ಸಲ್ಲಿಸುವಂತೆ ಕೋರಿ ಎಲ್ಲಾ ಭೂಮಾಪಕರಿಗೆ ದಿನಾಕ:15-03-2022 ಹಾಗೂ ದಿನಾಂಕ:16-07-2022ರಂದು ಪತ್ರ ಬರೆಯಲಾಗಿದೆ.<br><br>• ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಸರ್ವೆ ಕಾರ್ಯ ಪ್ರಗತಿಯಲ್ಲಿರುವುದರಿಂದ ಆಸ್ತಿಗಳ ಅತಿಕ್ರಮಣ ಮತ್ತು ಮರುಸ್ವಾಧೀನಕ್ಕೆ ಸಂಬಂಧಿಸಿದಂತೆ ನಿಖರವಾದ ಅಂಕಿ ಅಂಶಗಳ ಮಾಹಿತಿಯು ಸರ್ವೆ ಕಾರ್ಯ ಪೂರ್ಣಗೊಂಡು, ಭೂ ಮಾಪಕರು ವರದಿಯನ್ನು ನೀಡಿದ ನಂತರವಷ್ಟೆ ಲಭ್ಯವಾಗಲಿದೆ. |

ಸಂಖ್ಯೆ: ಕಂಇ 181 ಮುಸಪ್ರ 2022

**(ಶಶಿಕಲಾ. ಅ. ಜೊಲ್ಲೆ)**

ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು